**ಓ.ಎಸ್ ನಂಃ 7/2021**

**ಪಿ .ಡಬ್ಲು-1**

ಸಾಕ್ಷಿಯನ್ನು ದಿನಾಂಕಃ 25.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- ಪರ ಶ್ರೀ. ಪಿ ಎಂ ಎಸ್ ವಕೀಲರಿಂದ**

ಸಾಕ್ಷಿಗೆ ಕನ್ನಡ ಬಾಷೆ ಬರದೇ ಇರುವುದರಿಂದ ಶ್ರೀ ಕೆ ಎನ್ ಎಸ್ ವಕೀಲರನ್ನು ಬಾಷಾಂತರರನ್ನಾಗಿ ನೇಮಕ ಮಾಡಲಾಯಿತು.

ಪ್ರತಿವಾದಿಯು ಏನು ತಕರಾರನ್ನು ಸಲ್ಲಿಸಿರುತ್ತಾರೆಂದು ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ. ದಾವಾ ಐಟಂ ನಂ 1 ರ ನಿಮ್ಮ ಹೆಸರಿನಲ್ಲಿರುವ ಪಹಣಿ ಮತ್ತು ಮ್ಯುಟೇಷನ್ ಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಹೌದು. ದಾವಾ ಐಟಂ ನಂ 1 ಕ್ಕೆ ಕಂದಾಯ ಕಟ್ಟಿರುವ ಬಗ್ಗೆ ರಶೀದಿಗಳನ್ನು ಹಾಜರುಪಡಿಸಿರುತ್ತಿರಾ ಎಂದರೆ ನೆನಪಿಲ್ಲ. ದಾವಾ ಐಟಂ ನಂ 1 ರಲ್ಲಿ ನೀವು ಸ್ವಾಧೀನ ಇರುವ ಬಗ್ಗೆ ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ನಿಮ್ಮ ತಂದೆಗೆ ಹೇಗೆ ಬಂದಿರುತ್ತದೆ ಎಂದರೆ ನನ್ನ ಅತ್ತೆ ಕಡೆಯಿಂದ ತಂದೆಗೆ ವಿಲ್ ಮೂಲಕ ಬಂದಿರುತ್ತದೆ . ಸದರಿ ವಿಲ್ ಪತ್ರ ನೊಂದಣಿಯಾಗಿರುತ್ತದೆಯಾ ಇಲ್ಲ. ನಿಪಿ 1 ನ್ನು ನನ್ನ ತಂದೆಯ ಹೆಸರಿಗೆ ಮಾಡಿರುತ್ತಾರೆ. ಚೂಟಿಮಾ ಮೃತ ಪಟ್ಟ ಎಷ್ಟು ವರುಷಗಳಾಗಿರುತ್ತದೆ ಎಂದರೆ ನೆನಪಿಲ್ಲ, ಚೂಟಿಮಾ ತೀರಿಕೊಂಡ ನಂತರ ನಿಮ್ಮತಂದೆ ತೀರಿಕೊಂಡಿರುತ್ತಾರೆ ಎಂದರೆ ಸರಿ.

ದಾವಾ ಐಟಂ 1 ನ್ನು ಚೂಟಿಮಾ ಅಲಿಯಾಸ್ ಪ್ಯಾರೇಜಾನ್ ಅಲಿಯಾಸ್ ಅಲಿಮಾ ಪ್ರತಿವಾದಿಯ ಹಸರಿಗೆ ದಿನಾಂಕ 26.02.1991 ರಲ್ಲಿ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ನಿಪಿ 13 ರ ದಾಖಲೆಯನ್ನು ನೀವೇ ಹಾಜರುಪಡಿಸಿರುತ್ತೀರಿ ಎಂದರೆ ನೆನಪಿಲ್ಲ. ನಿಪಿ 13 ರ ಪ್ರಕಾರಣ ದಾವಾ ಐಟಂ ನಂ 1 ರ ಖಾತೆ ಈಗಲೂ ಸಹ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಅಕ್ರಮವಾಗಿ ಮಾಡಿಕೊಂಡಿರುತ್ತಾರೆ. ದಾವಾ ಐಟಂ ನಂ 1 ನ್ನು ಚೂಟಿಮಾ ರವರು ಪ್ರತಿವಾದಿಯ ಹೆಂಡತಿ ಶಂಷದ್ದಿನ್ನಿಸಾ ರವರಿಗೆ ದಿ 03.12.1986 ರಂದು ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

***(ಹರೀಶ್. ಜಿ )***

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**